Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 272 | ಮಂಗಳವಾರ 24—6—47 | ಬಿಡಿ ಪ್ರತಿ 3 ಪೈ

ಪೋರ್ಚುಗೀಸರೇ ! ಭಾರತದಿಂದ ಹೊರಡಿರಿ

ಬೊಂಬಾಯಿ ಜೂ 22 — ಈ ದಿವಸ ಪರಿಸಮಾಪ್ತಿಗೊಂಡ ಗೋವಾ ರಾಜಕೀಯ ಸಮ್ಮೇಳನದಲ್ಲಿ ಪೋರ್ಚುಗೀಸು ಸರಕಾರವು ಭಾರತವನ್ನು ಕೂಡಲೇ ಬಿಟ್ಟು ತೊಲಗಬೇಕೆಂದೂ ಅಧಿಕಾರವನ್ನು ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ವಹಿಸಬೇಕೆಂದೂ ಠರಾವು ಮಾಡಲಾಗಿದೆ.

ಜಪಾನಿಗೆ ಶಾಂತಿಕರಾರು

ಜವಾಹರ - ಜಿನ್ನಾರಿಗೂ ಆಮಂತ್ರಣ

ಲಂಡನ್ 18 — ಆಗಸ್ಟ್ ತಿಂಗಳಲ್ಲಿ ಆಸ್ಟ್ರೇಲಿಯದ ಕ್ಯಾನಬೆರ್ರಾದಲ್ಲಿ ಬ್ರಿಟೀಷ ಸಾಮ್ರಾಜ್ಯದ ಸಮ್ಮೇಲನವು ಜರುಗಲಿದೆ. ಆಗ್ಗೆ ಜವಾಸಿಸೊಡನೆ ಶಾಂತಿಕರಾರಿನ ಒಗ್ಗೆ ಮಾತುಕತೆಗಳು ನಡೆಯಲಿವೆ. ಈ ಪರಿಷತ್ತಿಗೆ ಪಂಡಿತ ನೆಹರು ಮತ್ತು ಜಿನ್ನಾರಿಗೆ ಆಮಂತ್ರಣವಿದೆ.

ಅಸ್ಸಾಂ ಪೂರ್ವ ಬಂಗಾಳದಲ್ಲಿ ಅತಿವೃಷ್ಟಿ

ಪೂರ್ವ ಬಂಗಾಳ ಮತ್ತು ಅಸ್ಸಾಂ ಪ್ರಾಂತಗಳಲ್ಲಿ ಅತಿ ವೃಷ್ಟಿ ಪ್ರಾರಂಭವಾಗಿದೆ ಫೆನಿ ಪ್ರಾಂತದಲ್ಲಿ ಅನೇಕ ಮನೆಗಳು ನಾಶವಾದವು ಪೈರು ನಾಶವಾಗಿದೆ ಹಲವು ಜನರಿಗೆ ಗಾಯಗಳಾಗಿವೆ ನವಖಾಲಿ ಚಿಟಿಗಾಂಗಗಳಲ್ಲಿ ಇದೇ ರೀತಿ ಆಗಿದೆ.

ತ್ರಿಪುರ ಸಂಸ್ಥಾನದಲ್ಲಿ ಹೌಂತಾ ನದಿಯಲ್ಲಿ ಪ್ರವಾಹ ಎದ್ದಿದೆ ರಾಜಧಾನಿ ಅಪಾಯ ಸ್ಥಿತಿಯಲ್ಲಿದೆ

— —

ಪೆಷಾವರ್ ಜೂ 21 — ಗಡಿನಾಡು ಕಾಂಗ್ರೆಸ್ ಸಮಿತಿಮತ್ತು ಕೆಂಪಂಗಿಯವರು ಮತ್ತೊಂದು ಸ್ವಯಂ ಸೇವಕ ದಳದವರು ಜಂಟಿಯಾಗಿ ನಡೆಸಿದ ಮಿಟಿಂಗಿನಲ್ಲಿ ಸ್ವತಂತ್ರದ ಪಠಾಣೇ ಸ್ಥಾನ ಬೇಕೆಂದಿರುವರು.

ರಂಗೂನ್ ಜೂ 22 — ರಂಗೂನ್ ಮುಸ್ಲಿಂರು ಪಾಕಿಸ್ಥಾನ ನಿಧಿ ಶೇಖರಿಸುತ್ತಿದ್ದಾರೆ.

ವಿವಿಧ ವರ್ತಮಾನ

ತುರ್ಕಿಯು ಅಮೇರಿಕಾಕ್ಕೆ ಸಾಮಂತ ರಾಜ್ಯವಾಗುತ್ತಿರುವುದೆಂದು ಸೋವಿಯಟ್ ಪತ್ರಿಕೆಗಳು ಬರೆಯುತ್ತಿವೆ.

ಂ ಂ

ಬ್ರಿಟೀಷ್ ವರ್ತಕ ಸಂಸ್ಥೆಗೆ ಭಾರತೀಯರಾದ ಡಾ|| ಯಂ. ಡಿ. ಚೋಪ್ರಾರವರು ಅಧ್ಯಕ್ಷರಾಗಿದ್ದಾರೆ. ಭಾರತೀಯರು ಈ ಸಂಸ್ಥೆಗೆ ಅಧ್ಯಕ್ಷರಾದದ್ದು ಇದೇ ಮೊದಲು.

ಂ ಂ

ಬಂಗಾಳ ಶಾಸನ ಸಭ್ಯರಲ್ಲಿ ಮುಸ್ಲಿಂ ಲೀಗ್ ಪಾರ್ಟಿ ನಾಯಕನಾದ ಪ್ರಧಾನಿ ಸುಹ್ರುವರ್ದಿರವರು ಹಿಂದೂ ವಿಭಾಗದಲ್ಲಿ ಸಭ್ಯರು, ಕಾಂಗ್ರೆಸ್ಸು ಪಾರ್ಟಿನಾಯಕರಾದ ಶ್ರೀ ಕಿರಣ ಶಂಕರರಾಯರು ಮುಸ್ಲಿಂ ವಿಭಾಗದಲ್ಲಿ ಸಭ್ಯರು.

ಂ ಂ

ನೈಜಾಂರ ಪರ್ಮಾನಾ ಸಾರಾಂಶ— ನನ್ನ ರಾಜ್ಯದಲ್ಲಿ ಹಿಂದೂ ಮುಸ್ಲಿಂ ರಿಬ್ಬರೂ ಇದ್ದಾರೆ. ಅವರಿಬ್ಬರೂ ನನಗೆ ಎಡಗಣ್ಣುಗಳು. ಆದ್ದರಿಂದ ನಮ್ಮ ರಾಜ್ಯವು ಹಿಂದೂಸ್ಥಾನ ಪಾಕಿಸ್ಥಾನಗಳೊಂದಿಗೆ ಸೇರುವದಿಲ್ಲ. ಇಬ್ಬರಿಗೂ ಸ್ನೇಹಿತರಾಗಿರುತ್ತೇವೆ. ಇದರವರೆಗಿನ ಶಾಸನದ ಪ್ರಕಾರ ನಾವು ಬ್ರಿಟೀಷರು ಹೊರಟುಹೋಗುತ್ತಲೂ ಸ್ವತಂತ್ರರಾಗಲು ಅವಕಾಶವಿದೆ. ವ್ಯವಹಾರಗಳು ಹೇಗೆ ಪರಿಣಮಿಸುತ್ತವೆಯೋ ಗಮನಿಸುತ್ತಾ ಇರುತ್ತೇವೆ.

ಂ ಂ

ನವದೆಹಲಿ ಜೂ 22 — ಡಾ|| ರಾಜೇಂದ್ರ ಪ್ರಸಾದರು ಯೂನಿಯನ್ ರಾಜ್ಯಾಂಗ ಸಮಿತಿಗೆ ಮೈಸೂರು ದಿವಾನ್ ಸರ್. ಎ. ರಾಮಸ್ವಾಮಿ ಮೊದಲಿಯಾರರನ್ನು ನೇಮಿಸಿದ್ದಾರೆ.

— —

ಮುನಿಸಿಪಲ್ ಮಿಟಿಂಗು

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಸಾಧಾರಣ ಜನರಲ್ ಮಿಟಿಂಗು ಈ ತಿಂಗಳು 28 ನೇ ತಾರೀಖು ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಅರಮನೆ ಸುದ್ದಿ

ಮೈಸೂರು ಜೂ 23 — ಶ್ರೀಮನ್ಮಹಾರಾಜರವರು ಈ ದಿವಸ ಅನೇರಿಕಾದಲ್ಲಿ ಮೈಸೂರು ಕೈಗಾರಿಕೆಗಳಿಗೆ ಏಜೆಂಟರಾಗಿರುವ ಕರ್ನಲ್ ಫೆಲ್ಟನ್ನರಿಗೆ ಫೋನ್ ಮಾಡಿ ಪ್ರಶ್ನಿಸಿದರು.

ಇಂದಿನ ವರ್ತಮಾನ

ನಿಖಿಲ ಕರ್ನಾಟಕ ಆಯುರ್ವೇದ ಮಹಾ ಮಂಡಲದ ಸಮ್ಮೇಳನವು ಬೆಳಗಾವಿನಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯುವುದು.

ನವದೆಹಲಿ ಜೂ 21 — 1945-46 ರಲ್ಲಿ 4600000 ಮಂದಿ ರೈಲಿನಲ್ಲಿ ಟಿಕೀಟಿಲ್ಲದೆ ಪ್ರಯಾಣ ಮಾಡುತ್ತಿದ್ದರು ಪತ್ತೆ ಮಾಡಲಾಗಿದೆಯೆಂದು ಒಂದು ಪ್ರೆಸ್‌ನೋಟು ತಿಳಿಸುತ್ತದೆ.

ಲಾಹೋರು ಜೂ 22 — ಲಾಹೋರಿನಲ್ಲಿ ಅಗ್ನಿ ಪ್ರಕರಣಗಳ ಗಲಭೆಗಳ ಅನಾಹುತದಿಂದ ಅಲ್ಲಿ ಜನರ ಜೀವನವೇ ಕಳವಳಗೊಂಡಾಗಿದೆ. ಈ ದಿನ 4 ಮಂದಿ ಏಕೊಲ್ಲಲ್ಪಟ್ಟರು.

ಲಂಡನ್ ಜೂ 22 — ಜರ್ಮನ್ ಅಧಿಕಾರಿಗಳು ರಾಜ್ಯಾಡಳಿತ ಕಾರ್ಯದಲ್ಲಿ ಅಸಹಕಾರವೀಯುವ ಶಂಕೆಯಿದ್ದು ಹಾಗೇನಾದರೂ ಆದರೆ ಬಹು ಕಡಿಮೆ ಸಂಖ್ಯೆಯಲ್ಲಿರುವ ಬ್ರಿಟೀಷರು ಜರ್ಮನಿಯ ರಾಜ್ಯಾಡಳಿತ ನಡೆಸಲಾರರೆಂದು ಹೇಳಲಾಗಿದೆ.

ನ್ಯಾಯನಿಧಾಯಕ ಸಭೆ

ಆಯವ್ಯಯ ಚರ್ಚೆಗೆ ಇವತ್ತು ಕಡೆಯ ದಿನ

ಸ್ವಂ ವಿ ಸು] ಬೆಂ ಜೂ 23

— —

ದಿವಾನ್ ಬಹದ್ದೂರ್ ಡಾ|| ರಾಯರು (ನಾಯಕರು) ಸಂಕಾಂದನರ ಆಯವ್ಯಯವನ ಚರ್ಚೆಯಲ್ಲಿ ಉಪಹಾರ ನಂತರ ಭಾಷಣ ಮಾಡಿ ಈ ಸಲದ ಚರ್ಚೆಯಲ್ಲಿ ಕೆಲವರು ಬಹಳ ಉಗ್ರವಾದ ಟೀಕೆಗಳನ್ನು ಬಹಳ ವಿಷಾದಕರವಾಗಿಯೂ ದಾರಿ ತಪ್ಪಿಯೂ ಅವಸರಕಾರವಾಗಿ ರೆವಿನ್ಯೂ ಮಂತ್ರಿಗಳ ವಿಚಾರವಾಗಿಯೂ ಸರಕಾರದ ಅಧಿಕಾರಿಗಳ ಮೇಲೆ ಮಾಡಿರುವರು ಎಸ್ಟಮಯವಾದದ್ದು ಮತ್ತು ಹೇಳರವಾದದ್ದು. ಲಂಚ ಲೋಪ ದೋಷಗಳು ಎಲ್ಲಾ ಕಡೆಯಲ್ಲೂ ಇದ್ದೇ ಇದೆ. ನಾವು ಕೈಲಾದವರಿಗೂ ನಮ್ಮ ಕ್ಲುಶ್ತ ಅವಧಿಯಲ್ಲಿ ಮಾಡುತ್ತಿದ್ದೇವೆ, ಅತ್ಮ ಸಾಕ್ಷಿಯಾಗಿಯೂ, ದೇವರಿಗೆ ಹೆದರಿಯೂ, ರಾಜಭಕ್ತಿಯಿಂದ ನಡಯುತ್ತಿದ್ದೇವೆ ನಮ್ಮನ್ನು ರಾಜಿನಾಮೆ ಕೊಡಿ ಎಂದು ಹೇಳುವದಕ್ಕೆ ಯಾರಿಗೂ ಹಕ್ಕಿಲ್ಲಾ. ನಾವು ಪ್ರಜೆಗಳಿಂದ ಆರ್ಸಿ ಶ್ರೀಮನ್ಮಹಾರಾಜರಿಂದ ನೇಮಕವಾದವರು ಮುಂತಾಗಿ ಧೈರ್ಯವಾಗಿಯೂ ದಿಟ್ಟಿತನದಿಂದಲೂ ಭೀಷಣ ಭಾಷಣ ಮಾಡಿದರು.

ಂ ಂ

ಭಾರತ ರಾಜ್ಯಾಂಗ ಸಭೆಗೆ ಚುನಾವಣೆ ಯಾವ ರೀತಿ ಮಾಡಬೇಕೆಂಬ ವಿಷಯವನ್ನು ದಿವಾನರು ಶ್ಲಾಘಿಸಿದಿಸುವರೆಂದೂ ಬಹುಶಃ ಚುನಾವಣೆ ಜುಲೈ 7 ರಲ್ಲಿ ನಡೆಯಬಹುದೆಂದೂ ಅಧಿಕಾರಿ ಸದಸ್ಯರು ಭಾಗವಹಿಸುವ ಸಂಭವವಿಲ್ಲವೆಂದೂ ಚೀಫ್ ಸೆಕ್ರೆಟರಿಯವರು ಪ್ರಶ್ನೆಗಳಿಗೆ ಉತ್ತರವಿತ್ತರು.

ವಿವಾಹ ಮಹೋತ್ಸವ

ಮಂತ್ರಾಲಯ ಜೂ 23 — ಶ್ರೀ ಮಠದ ಶ್ರೀ ಎಸ್. ರಾಜಗೋಪಾಲಾಚಾರ್ಯರು ತಮ್ಮ ಸಹೋದರರ ಕುಮಾರ ಚಿ|| ಲಕ್ಷ್ಮೀನಾರಾಯಣಾಚಾರ್ಯರಿಗೆ ನಂಜನಗೂಡು ಶ್ರೀ ರಿಟ್ಟಿ ಸುಬ್ಬಣ್ಣಾಚಾರ್ಯರ ಕುಮಾರಿ ಚಿ|| ಸಾ|| ಪ್ರವಿಳಾಕುಮಾರಿಯವರನ್ನು ಕಂದುಕೊಂಡು ವಿವಾಹ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು.

ಧ. ಯು, ಸ, ಬುಲೆಟಿನ್

ಪ್ರ.— ರಾಜಾ ಎಸ್. ಗುರುರಾಜಾ ಚ್ಛಾರ್ಯ, ಅಖಿಲ ಕರ್ನಾಟಕ ಸನಾತನಿಗಳ ಸಂಘ, ಸಂಚಾಲಯ.

ಸನಾತನ ಸಮ್ಮೇಳನ

ಬೊಂಬಾಯಿಯಲ್ಲಿ ಶ್ರೀ ವಲ್ಲಭ ಮತದ ಗೋಸ್ವಾಮಿ ಶ್ರೀ ಕೃಷ್ಣಜೀವ್ಜೀ ಮಹಾರಾಜರ ನೇತೃತ್ವದಲ್ಲಿ ಅ॥ ಭಾ॥ ಧರ್ಮಾಚಾರ್ಯರ ಪರಿಷತ್ತು 8 ನೇ ತಾ॥ ನಡೆಯಿತು. 15 ಸಾವಿರ ಜನರು ಭಾಗವಹಿಸಿದ್ದರು. ಶ್ರೀ ಸ್ವಾಮಿ ಕರ ಪಾತ್ರಜೀಯವರೂ ಸಹ ದಯಮಾಡಿ ಸಿದ್ದರು. ಎಂಟು ಠರಾವುಗಳು ಪಾ ಸಾದವು. ಇದರಲ್ಲಿ ಪಂಡರಾಪುರಕ್ಕೆ ಹರಿಜ ನರನ್ನು ಬಿಡುವ ಪ್ರಶ್ನೆಯನ್ನು ಸರ್ಕಾರ ದವರು ಆಗಸ್ಟ್ ಮಾಸದಲ್ಲಿ ಪುನರ್ವಿಮ ರ್ಶಿಸುವ ಸಂದರ್ಭದಲ್ಲಿ ಲಕ್ಷಾಂತರ ಜ ನರು ಆದನ್ನು ವಿರೋಧಿಸಿ ಸತ್ಯಾಗ್ರಹ ಮಾಡಬೇಕು ಮತ್ತು ಸರ್ವ ವಿಧದಿಂದ ಪ್ರವೇಶಕ್ಕೆ ಅವಕಾಶ ಕೊಡಕೂಡದು ಎಂಬುದು 2 ಠರಾವುಗಳು ಮುಖ್ಯವಾ ದದ್ದು.

ಶ್ರೀ ಸ್ವಾಮಿ ಕರಪಾತ್ರಿಯವರು ಕಲ್ಕತ್ತೆಗೆ

- ದೆಹಲಿ 15-6-47- ಇಂದು ಪಿಮಾನ ದ ಮೂಲಕ ಶ್ರೀ ಸ್ವಾಮಿ ಕರಪಾತ್ರ ಜೀ ಮಹಾರಾಜರವರು ಧರ್ಮ ಯುದ್ಧ ದ ವ್ಯಾಪ್ತಿ ಹೆಚ್ಚಿಸುವ ವಸ್ತು ಸಾಕೇ ಸ್ಥಾನ ವಿರೋಧ ಪ್ರಚಾರಕ್ಕಾಗಿಯೂ ಸಹ ಕಲ್ಕತ್ತೆಗೆ ಪ್ರಯಾಣ ಬೆಳಿಸಿದರು.

ಬೃಂದಾವನದಿಂದ ಇಂದು ಧರ್ಮ ವೀರರ 8 ನೇ ತಂಡವು ದೆಹಲಿಗೆ ಬಂ ದು ಸೇರಿತು.

'ರಾಮರಾಜ್ಯ' ಪ್ರಾರಂಭ

ವಿಶೇಷ ತಾ॥ 16-6-47

ಕಾಂಗ್ರೆಸು ಸರಕಾರವು ಧರ್ಮ ಯುದ್ಧ ಸಮಾಚಾರವನ್ನು ಜನರಿಗೆ ತಿ ಳಿಯುವಂತೆ ಬಚ್ಚಿಡುವ ಉದ್ದಿಶ್ಯದಿಂದ ಪತ್ರಿಕೆಗಳಲ್ಲಿ ಅದು ಪ್ರಚಾರವಾಗದಂ ತೆ ಮಾಡಿರುವುದರಿಂದ ವಿಶಾಖಪಟ್ಟಿಣ ಸ ನಾತನ ಸಂಘದವರು 'ರಾಮರಾಜ್ಯ' ಎಂಬ ದಿನ ಪತ್ರಿಕೆಯನ್ನು ಇದೇ 20-6-47 ರಿಂದ ಪ್ರಾರಂಭಿಸುತ್ತಾರೆಂದು ತಿಳಿದು ಬಂದಿದೆ.

— —

ದೆಹಲಿ ಜೂನ್ 14

ದರ್ಮಯುದ್ಧದಲ್ಲಿ ಇಂದು ನಾಗ ಸಂಪ್ರದಾಯದ ಮೊದಲನೇ ತಂಡವು ಸತ್ಯಾಗ್ರಹ ಮಾಡಿ ಬಂಧಿತರಾದರು ಇ ವರು ಇದೇ ಹೊಸದಾಗಿ ಬಂದು ಸೇರಿ ದ್ದರು.

ರೇಷನಿಂಗ್ ಆಫೀಸ್, ಮೈಸೂರು.

No. R I - 410 / 46

ಪ್ರಸಿದ್ಧ ಪತ್ರಿಕೆ

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಇದೇ 1947 ನೇ ಜೂನ್ ಮಾಹೆ 23 ನೇ ತಾರೀಖು ಲಾಗಾಯ್ತು ಹೊಸ ರೇಷನ್ ಕಾರ್ಡುಗಳನ್ನು, ಅವರವರ ಡಿಪೋಗಳಲ್ಲಿ ಹಳೇ ಕಾರ್ಡುಗಳನ್ನು ವಾಪ್ಸು ಮಾಡಿ ಪಡೆಯತಕ್ಕದ್ದು. ಈ ಹೊಸ ಕಾರ್ಡುಗಳು 1947 ನೇ ಜುಲೈ ಮಾಹೆ 1 ನೇ ತಾರೀಖಿನಿಂದ ಚಾಲ್ತಿಗೆ ಬರುವುದು.

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಮೈಸೂರು ಸಿಟಿ ಮುನಿಸಿಪಲ್ ಆಫೀಸ್

ಮೈಸೂರು, ತಾ || 20-6-47

ನೋಟಿಫಿಕೇಷನ್

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತರಿಗೂ ತಿಳಿಯಪಡಿಸೆವ್ಕ ದೇನೆಂದರೆ—

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನಲ್ಲಿರುವ ಎಲ್ಲಾ ವಾಹನಗಳ ನ್ನೂ 1949-48 ನೇ ಸಾಲಿಗೆ ಚಾಲ್ತಿ ಮಾಹೆ 25 ರ ಲಾಗಾಯ್ತು ರಿಜಿಸ್ಟರ್ ಮತ್ತು ನಂಬರು ಹಾಕಿಸಲಾಗುತ್ತೆ. ವಾಹನಗಳ ಮಾಲೀಕರು ಆ ದಿನಸದ ಲಾಗಾಯ್ತು ತಮ್ಮತಮ್ಮ ವಾಹನಗಳನ್ನು ಅಂದರೆ ಬೆಳಿಗ್ಗೆ 9 ಘಂಟೆಯಿಂದ 11 ಘಂಟೆವರಿಗೆ ಸೈಕಲ್‌ಗಳನ್ನೂ, ಸಾಯಂಕಾಲ 3 ಘಂಟೆಯಿಂದ 5 ಘಂಟೆ ವರೆಗೆ ಇತರೆ ವಾಹನಗಳನ್ನೂ ಮುನಿಸಿಪಲ್ ಆಫೀಸಿಗೆ ತೆಗೆದುಕೊಂಡುಬಂದು ರಿಜಿಸ್ಟರ್ ಮಾಡಿಸತಕ್ಕದ್ದು.

(ಸಹಿ) ಟಿ. ನರಸಿಂಹಯ್ಯಂಗಾರ್
ವೈಸ್ ಪ್ರೆಸಿಡೆಂಟ್

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು. ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera 10th Glorious Week

RAJAKUMARI

ಟಿ. ಎಸ್. ಬಾಲಯ್ಯ, ತವಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

Edited, Printed and Published by M. S Krishna Rao at the Satyvadi Press Chamara Agrahar, Mysore.

ಸತ್ಯವಾದಿ ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನವಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ ರೂ. 9.

ಸೋಮವಾರದ ಸಂಚಿಕೆ ಮಾತ್ರ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0